ಹೊನ್ನಾವರ ಕಾರಾಗೃಹಕ್ಕೆ ಶೌಚಾಲಯ ಹಾಗೂ ನೀರಿನ ವ್ಯವಸ್ಥೆ

811 - ಡಾ॥ ಎಂ.ಸಿ. ಕೀರ್ತಿ (ಕುಮಟಾ) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊನ್ನಾವರ ಉಪ ಕಾರಾಗೃಹದಲ್ಲಿ (ಸಬ್ ಜೈಲ್) ಸರಾಯಾದ ಮೂತ್ರಖಾನ್ ಶೌಚಾಲಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಕನಿಷ್ಟ ಅವಶ್ಯಕತೆಗಳನ್ನು (ಅಲ್ಪ ಖರ್ಚು ತಗಲುವ) ಯಾವಾಗ ಪೂರೈಸಲಾಗುವುದು?*

ಶ್ರೀ ಎನ್. ಮಿರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಲೈಸೆನ್ಸ್ ಪಡೆಯದ ಸಾರಾಯಿ ಅಂಗಡಿಗಳು

814 - ಡಾ॥ ಎಂ.ಪಿ. ಕರ್ತಿ (ಕುಮಟಾ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಒಂದು ಲೈಸೆನ್ಸ್ ಪಡೆದ ಶರಾಬು ಅಂಗಡಿಗೆ ಬದಲಾಗಿ 8-10 ಲೈಸೆನ್ಸ್ ಇಲ್ಲದ ಶರಾಬು ಅಂಗಡಿ ವ್ಯಾಪಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?*

ಇ) *ಶರಾಬು ಅಂಗಡಿಗಳಿಗೆ ರಾಷ್ಟ್ರೀಯ ಹೆದ್ದಾರಿ ಹತ್ತಿರ, ಶಾಲೆ ಇತ್ಯಾದಿ ವಿದ್ಯಾ ಸಂಸ್ಥೆಯ ಬಳಿ, ಪ್ರಾರ್ಥನಾ ಸ್ಥಳಗಳ ಬಳಿ, ಹರಿಜನ ಆಸ್ತಿಗಳಿರುವಲ್ಲಿ ಲೈಸೆನ್ಸ್ ಕೊಡಬಾರದೆಂಬ ನಿಯನವಿದ್ದರೂ ನಿಯಮಗಳ ಉಲ್ಲಂಘನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಉ) *ವ್ಯಾಪಕವಾಗಿ ನಡೆದಿರುವ ಪಾನ ನಿರೋಧ ಚಳುವಳಿಯಲ್ಲಿ ಭಾಗವಹಿಸಿದ ಜನ ಶಾಂತತೆಯಿಂದ ಲೈಸೆನ್ಸ್ ಇಲ್ಲದ ಅಂಗಡಿಗಳನ್ನು ಮುಚ್ಚಿಸಲು ಹೋದರೆ ಸರ್ಕಾರ ಅಬಕಾರಿ ಸಿಬ್ಬಂದಿ ಹಾಗೂ ಪೋಲೀಸ್ ನೆರವು ಕೊಡಲು ಮುಂದಾಗುವುದೇ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿಗಳು) :

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ಉ) ಇದು ಅಗತ್ಯ ಇರುವುದಿಲ್ಲ. ಅಬಕಾರಿ ಇಲಾಖೆಯು ಅಂತಹ ಅನಧಿಕೃತತ ಅಂಗಡಿಗಳ ಮೇಲೆ ಕ್ರಮ ಕೈಗೊಳ್ಳಲು ಸೂಕ್ತವಾಗಿ ಅಬಕಾರಿ ಇಲಾಖೆಯ ವಿಚಕ್ಷಣಾ ದಳವನ್ನು ಸಜ್ಜುಗೊಳಿಸಲಾಗಿದ್ದು ವೈಯಕ್ತಿಕ ಆಗಲಿ, ಅಥವಾ ಸಂಘ ಸಂಸ್ಥಗಳಿಂದ ಆಗಲಿ, ಅನಧಿಕೃತ ಅಂಗಡಿಗಳ ಬಗ್ಗೆ ಯಾವುದೇ ಮಾಹಿತಿ ಬಂದಲ್ಲಿ, ಅವುಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.